SRI B. SUBBAYYA SHETTY.—Interruptions are there. It will be looked into whenever such interruptions arise.

ABSENCE OF THE MINISTERS

ಅಧ್ಯಕ್ಷರು.—ಈಗ ರೂಲ್ ೩೧೨ರ ಕೆಳಗೆ ಬರತಕ್ಕ ವಿಷಯವನ್ನು ತೆಗೆದುಕೊಳ್ಳೋಣವೆಂದರೆ ಮಾನ್ಯ ಮಂತ್ರಿಗಳೇ ಇಲ್ಲ.

ಶ್ರೀ ಎಚ್ ಡಿ. ದೇವೇಗೌಡ (ಹೊಳೆನರಸೀಪುರ) —ಅವರು ೨ ಗಂಟೆ ಮೇಲೆ ಬರುತ್ತಾರೆ. ಈ ಸಂದರ್ಭದಲ್ಲಿ, ಈ ಸದನದ ಕಾರ್ಯಕಲಾಪಗಳು ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳುವುದು ಸರ್ಕಾರಿ ವಿಪ್ಪಿನ ಕರ್ತವ್ಯವಾಗಿದೆ. ಆದರೆ ಅವರು ಅಧಿವೇಶನ ನಡೆಯುತ್ತಿರುವಾಗ ದೆಹಲಿಗೆ ಯಾತ್ರೆ ಮಾಡಿದ್ದಾರೆ ಎಂದರೆ ಅದು ಸದನಕ್ಕೆ ಅಗೌರವ ತರತಕ್ಕ ವಿಚಾರವಾಗಿದೆ. ಅವರಿಗೆ ತಿಂಗಳಿಗೆ ಒಂದೂವರೆ ಸಾವಿರ ರೂಪಾಯಿ ಸಂಬಳ ಕೊಟ್ಟು, ಒಂದೂವರೆ ಲಕ್ಷ ರೂಪಾಯಿನ ಮನೆಯನ್ನು ಸಜ್ಜು ಮಾಡಿ ತಿಂಗಳಿಗೆ ೨ ಸಾವಿರ ರೂಪಾಯಿ ಮನೆ ಬಾಡಿಗೆ ಕೊಟ್ಟು, ಓಡಾಡಲು ಕಾರನ್ನು ಕೊಟ್ಟಿರುವಾಗ ಅವರು ಸರ್ಕಾರಿ ಕಾರ್ಯಕಲಾಪ ನಡೆಯತಕ್ಕ ಸಂದರ್ಭದಲ್ಲಿ ಈ ಸದನದಲ್ಲಿ ಕುಳಿತಿರಬೇಡವೆ ? ಅವರು ತಮಗೆ ಸಹಾಯಕವಾಗಿ ಕೆಲಸ ಮಾಡಬೇಡವೇ ಎಂದು ಕೇಳಬಯಸುತ್ತೇನೆ. I am sorry for this kind of attitude. It shows scant respect for the House. ಆದ್ದರಿಂದ ತಾವು ದಯವಿಟ್ಟು ಪುಲ್ ಅಪ್ ಮಾಡಬೇಕು, ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷಿಣಿಯವರೇ, ಈ ಸಂದರ್ಭದಲ್ಲಿ ನನಗೇನನ್ನಿಸುತ್ತದೆ ಎಂದರೆ, ಈ ಸದನದ ಕೆಲಸಕಾರ್ಯಗಳನ್ನು ಮಾಡುವುದರ ಬಗ್ಗೆ ಅವರಿಗೆ ಅವಕಾಶ ಕೊಡುವುದಕ್ಕಿಂತ ಹೆಚ್ಚಾಗಿ ಅಧಿಕಾರದಲ್ಲಿರುವಂತಹ ಪಕ್ಷದವರು ಸರ್ಕಾರಿ ಸಂಬಳದಿಂದ ತಮ್ಮ ಪಕ್ಷದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗಿದೆ. ಹಿಂದೆ ಅವರು ವ್ಹಿಪ್ ಆಗಿದ್ದಾಗ ತಮ್ಮ ಪಕ್ಷದ ಕೆಲಸಗಳನ್ನು ಮಾಡುತ್ತಿದ್ದರು, ಅದಕ್ಕೆ ಆವಾಗ ಅವಕಾಶ ಇತ್ತು. ಆದರೆ ಇವತ್ತು ಹಾಗಿಲ್ಲ ಎಂಬುದನ್ನು ಅವರು ತಮ್ಮ ನೆನಪಿಗೆ ತಂದುಕೊಂಡಿಲ್ಲ ಅನ್ನುವ ಹಾಗೆ ಕಾಣುತ್ತದೆ. ಆವರಿಗೆ ಸರ್ಕಾರದಿಂದ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದು ಸದನ ನಡೆಯುತ್ತಿರುವಾಗ ತಮ್ಮ ಪಕ್ಷದ ಕೆಲಸಗಳಿಗೆ ಹೋಗಿದಾ ರೆಂದರೆ ಅದಕ್ಕಿಂತಲೂ ಹೇಯವಾದ ನಡತೆ ಇನ್ನೊಂದು ಇರಲಿಕ್ಕೆ ಸಾಧ್ಯವಿಲ್ಲ ಬಹುಶಃ ಇಂತಹ ವ್ಹಿಪ್‌ಗಳಿಗೆ ಸರ್ಕಾರದ ಅಥವಾ ಸಾರ್ವಜನಿಕರ ಹಣವನ್ನು ಖರ್ಚು ಮಾಡತಕ್ಕದ್ದು ಸಾಧುವಲ್ಲ. ಬಹುಶಃ ಅವರು, ನಾನು ಕಾಂಗ್ರೆಸ್ ವ್ಹಿಪ್ ಆದ್ದರಿಂದ ಪಕ್ಷದ ಕೆಲಸಗಳನ್ನು ಮಾಡಿಕೊಂಡಿರಬಹುದು, ಸದನಕ್ಕೂ ನನಗೂ ಸಂಬಂಧವಿಲ್ಲ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಅವರು ಈ ಸದನದ ಕೆಲಸ ಕಾರ್ಯಗಳಲ್ಲಿ ತೊಡಗದಿದ್ದರೂ ಸಹ ಮೊನ್ನೆಯ ದಿವಸ ಇಲ್ಲಿ ಮಾತನಾಡತಕ್ಕ ಕಾಲದಲ್ಲಿ ಬಹಳ ಕಾತರತೆಯಿಂದ ಮಾತನಾಡಿದರು. ಆದರೆ ಇವತ್ತಿನ ದಿವಸ ಅವರ ಕೆಲಸ ಬಹಳ ಹೇಯವಾಗಿ ಕಾಣುತ್ತದೆ. ಅವರಿಗೆ ಖರ್ಚು ಮಾಡತಕ್ಕ ಹಣ ಅಷ್ಟಿಷ್ಟಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ದೇವೇಗೌಡರಿಗೂ ಕೊಡದಷ್ಟು ಸವಲತ್ತನ್ನು ಅವರಿಗೆ ಕೊಟ್ಟಿದ್ದೀರಿ ಹೀಗಿರುವಾಗ, ಅವರು ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ, ಇದರ ಮೇಲ್ವಿಚಾರಣೆ ಜವಾಬ್ದಾರಿಗಳನ್ನು ಹೊತ್ತುಕೊಳ್ಳದೆ ತಮ್ಮ ಪಕ್ಷದ ಕೆಲಸಕ್ಕೋಸ್ಕರ ದೆಹಲಿಗೆ, ಕಾಶ್ಮೀರಕ್ಕೆ ಓಡಾಡುತ್ತಿದ್ದರೆ ಹೇಗೆ ? ಇದು ಸರ್ಕಾರಕ್ಕಾಗಲೀ, ಶಾಸನ ಸಭೆಗಾಗಲೀ ಗೌರವ ತರತಕ್ಕದ್ದಲ್ಲ. ಆದ್ದರಿಂದ ಅವರು ಈ ರೀತಿ ಕೆಲಸ ಮಾಡುವುದಾದರೆ, ಅವರಿಗೆ ಕೊಟ್ಟಂತಹ ಸೌಲಭ್ಯಗಳನ್ನು ವಾಪಸ್ಸು ಪಡೆಯತಕ್ಕ ತೀರ್ಮಾನಕ್ಕೆ ಬರಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಸರ್ಕಾರಿ ವ್ಹಿಪ್ ಆಗಿರುವವರು ಸದನದ ಕಾರ್ಯಕಲಾಪಗಳು ಸುಗಮವಾಗಿ ನೇರವೇರಲು ತಮಗೆ ಸಹಾಯಕರಾಗಬೇಕು, ಅಜೆಂಡಕ್ಕನುಗುಣವಾಗಿ ಯಾವ ಯಾವ ಮಂತ್ರಿಗಳು ಇದ್ದಾರೆ, ಇಲ್ಲ ಎಂಬುದನ್ನು ತಿಳಿಸಬೇಕು. ಕ್ವೋರಂನ್ನು ನೋಡಿಕೊಳ್ಳಬೇಕು. ಈ ಎಲ್ಲ ದೃಷ್ಟಿಯಿಂದ ಅವರನ್ನು ನೇಮಕ ಮಾಡಿ ಅವರಿಗೆ ಒಂದು ಆಫೀಸನ್ನು ಸಹ ಕೊಟ್ಟಿದ್ದೇವೆ. ಈ ಸದನದ ಕಾರ್ಯಕಲಾಪಗಳು ಮುಗಿದ ಮೇಲೆ ಅವರು ತಮ್ಮ ಸ್ವಂತ ಕೆಲಸವನ್ನಾಗಲೀ ಅಥವಾ ತಮ್ಮ ಪಕ್ಷದ

ಕೆಲಸವನ್ನಾಗಲಿ ಮಾಡಿಕೊಳ್ಳಬಹುದು. ಅವರು ೧ ಗಂಟೆಯಿಂದ ೬ ಗಂಟೆಯವರೆಗೆ ಇಲ್ಲಿ ಇರಬೇಕು. ಅವರಿಗೆ ವಿಶೇಷ ಸವಲತ್ತುಗಳನ್ನು ಕೊಟ್ಟಿರುವುದಲ್ಲದೆ ಅವರ ಆಫೀಸನ್ನು ಸಜ್ಜು ಮಾಡುವುದಕ್ಕೆ ೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇಷ್ಟೆಲ್ಲ ಸವಲತ್ತುಗಳನ್ನು ಒದಗಿಸಿ ಕೊಟ್ಟಿರುವ ಸಂದರ್ಭದಲ್ಲಿ ಅವರು ತಮ್ಮ ಪಕ್ಷದ ಕೆಲಸವನ್ನು ಮಾಡುವುದಾದರೆ ಈ ಸದನದಲ್ಲಿ ಅವರಿಗೆ ಭೀಮಾರಿ ಹಾಕಬೇಕಾಗಿದೆ. Either they must change the ship or the conduct of the whip must be questioned here. It is a very serious matter. We are not prepared to tolerate it. ಇವತ್ತು ಈ ಮನೆಯ ಹಣವನ್ನು ಅವರಿಗೆ ಕೊಡುತ್ತಿರುವಾಗ ಈ ಸಭೆಯೇ ಭೀಮಾರಿ ಹಾಕುತ್ತದೆ. ಇವತ್ತಿನ ದಿವಸ ಅವರು ಬಹಳ ಕರ್ತವ್ಯ ಲೋಪ ಮಾಡಿದಾರೆ. ಆದ್ದರಿಂದ ತಾವು ದಯವಿಟ್ಟು ಪುಲ್ ಅಪ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅವರಿಗೆ ಕಾಂಗ್ರೆಸ್ ಫಂಡಿನಿಂದ ಏನು ಸಂಬಳ ಕೊಡುತ್ತಿಲ್ಲ. ಅವರಿಗೆ ಕೊಡುತ್ತಿರುವ ಸಂಬಳ ಸರ್ಕಾರದ್ದು, ಸಾರ್ವಜನಿಕರದ್ದು. ಆದ್ದರಿಂದ ಇದು ಬಹಿರಂಗ ಭ್ರಷ್ಟಾಚಾರಕ್ಕೆ ಸಾಕ್ಷಿಯಾಗಿದೆ.

ಅಧ್ಯಕ್ಷರು.—ಅವರು ಇವತ್ತು ಬರಬಹುದು.

ಶ್ರೀ ಕೊಣಂದೂರು ಲಿಂಗಪ್ಪ.—ಅವರು ಬರುವುದು ನಾಡಿದ್ದು. ನಮ್ಮ ಹಣವನ್ನು ತೆಗೆದು ಕೊಂಡು ಅವರು ತಮ್ಮ ಸ್ವಂತ ಕೆಲಸಕ್ಕೆ ಹೋಗಿದ್ದಾರೆ. ಅದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು. ಸರ್ಕಾರಿ ನೌಕರರು ಕೆಲಸಕ್ಕೆ ಗೈರು ಹಾಜರಾದರೆ ಹೇಗೆ ಸಂಬಳವನ್ನು ಖೋತಾ ಮಾಡುತ್ತೀರೋ ಹಾಗೆಯೇ ಅವರ ಸಂಬಳದಲ್ಲಿಯೂ ಖೋತಾ ಮಾಡಬೇಕು.

1-30 P. M.

ಶ್ರೀ ಬಿ. ಸಂಬ್ಬಯ್ಯಶೆಟ್ಟಿ (ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು).—ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಾದ ಕೊಣಂದೂರು ಲಿಂಗಪ್ಪನವರು ನಮ್ಮ ವಿಪ್ ಅವರ ಗೈರು ಹಾಜರಿಯ ಬಗ್ಗೆ ಬಹಳಷ್ಟು ಕಳಕಳಿಯ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ವಿಪ್ ಅವರ ಕೆಲಸ ಏನು ಎನ್ನುವುದನ್ನು ಸ್ವಲ್ಪ ಹೇಳಿದರು. ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು, ಇದಕ್ಕೆ ಸರಿಯಾದ ವ್ಯವಸ್ಥೆಯನ್ನು ಕಾಂಗ್ರೆಸ್ ಪಕ್ಷದ ಕಡೆ ಹೇಳಿ ಮಂತ್ರಿ ಸಭಾಧ್ಯಕ್ಷರವರಿಗೆ ಸಹಕಾರ ಕೊಟ್ಟು ಕೆಲಸ ಮಾಡಬೇಕು ಎನ್ನುವುದನ್ನೂ ಅವರು ಹೇಳಿದ್ದಾರೆ.

SRI K. PUTTASWAMY.—The Government whip has got responsibility towards the entire House.

SRI B. SUBBAYYA SHETTY.—I agree. ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯಬೇಕು, ಕೋರಂ ಇರಬೇಕು ಮಂತ್ರಿಗಳು ಸಭೆಯಲ್ಲಿ ಸರಿಯಾದ ಸಮಯಕ್ಕೆ ಬರಬೇಕು, ಯಾರು ಸರ್ಕಾರದವರ ಪರವಾಗಿ ಉತ್ತರ ಹೇಳಬೇಕು ಎನ್ನುವಂಥ ವ್ಯವಸ್ಥೆಯನ್ನೆಲ್ಲಾ ವಿಪ್ ಅವರು ನೋಡಿಕೊಳ್ಳಬೇಕು ಎಂದು ಹೇಳಿದರು. ಆದ್ದರಿಂದ ಈಗ ನಾವು ನೋಡಬೇಕಾದ್ದು ವಿಪ್ ಸಭೆಗೆ ಬಂದಿದ್ದಾರೆಯೋ ಇಲ್ಲವೋ ಎನ್ನುವುದಲ್ಲ, ಈಗ ನೋಡಬೇಕಾದ್ದು, ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆದಿಲ್ಲವೇ, ಏನು ಎನ್ನುವುದನ್ನು. ಈಗ ಕೋರಂ ಇದೆ, ಮಂತ್ರಿಗಳೂ ಸಹ ಸಭೆಯಲ್ಲಿದ್ದಾರೆ. ಆದ್ದರಿಂದ ಮಾನ್ಯ ವಿರೋಧಪಕ್ಷನಾಯಕರು ಯಾವ ಮಾತುಗಳನ್ನು ಹೇಳಿದ್ದಾರೆಯೋ ಅದನ್ನೇ ಇಲ್ಲಿ ನಾನು ಉಚ್ಚರಿಸಿದ್ದೇನೆ. ಎಲ್ಲವೂ ಇಲ್ಲಿ ಸಂಸೂತ್ರವಾಗಿ ನಡೆಯುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಗಮನ ಸೆಳೆಯುವ ಸೂಚನೆಗೆ ಆರೋಗ್ಯ ಸಚಿವರು ಉತ್ತರ ಕೊಡಬೇಕಾಗಿತ್ತು. ನಮ್ಮ ಒಂದು ವಿಷಯ ರೂಲ್ ೩೧೨ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ, ಆದ್ದರಿಂದ ಯಾವ ಮಂತ್ರಿಗಳು ಸಭೆಯಲ್ಲಿಲ್ಲ ಅವರನ್ನು ವಿಷಯ ತಿಳಿಸಿ, ಸಭೆಗೆ ಬರುವಂತೆ ವ್ಯವಸ್ಥೆ ಮಾಡಬೇಕಾದ್ದು ವಿಪ್ ಅವರ ಕೆಲಸ ಸರ್ಕಾರದವರು ವಿಪ್ ಅವರನ್ನು ತಮಾಷೆಗೆ ನೇಮಕ ಮಾಡಿಲ್ಲ, ಅವರಿಗೂ ತಕ್ಕ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಈ ಸದನದ ಕೆಲಸ ಸಂಗವುವಾಗಿ ನಡೆಯುತಕ್ಕ

ಹೊಣೆಗಾರಿಕೆಯನ್ನು ಹೊತ್ತು ಅವರು ಕೆಲಸ ಮಾಡಬೇಕಾಗಿದೆ. ಈ ದಿಸೆಯಲ್ಲಿ ಅಧ್ಯಕ್ಷಣಿಯವರಿಗೆ ಅವರು ಸಹಕಾರ ಕೊಡತಕ್ಕ ಅವಶ್ಯಕತೆ ಇದೆ. ಇದು ಬಿಟ್ಟು ಅವರು ತಮ್ಮ ಪಾರ್ಟಿಯ ಕೆಲಸವನ್ನು ಮಾಡುವುದಕ್ಕೆ ಹೋದರೆ ಹೇಗೆ ?

The Government Whip cannot leave this place when the Session is going on.

SRI H. M. CHANNABASAPPA.—The Hon'ble Leader of the Opposition just now mentioned about the Call Attention notice.

MADAM SPEAKER.—I called him to raise the matter under Rule 312 but I found the Minister was not there. Then, I once again went back to Call Attention Notice because the hon'ble Member came right in time. Sri Deve Gowda was mentioning about that Motion and not the Calling Attention.

SRI H. D. DEVE GOWDA.—When the Hon'ble Member was not present, then the Hon'ble Speaker called me to raise the matter Under Rule 312 but the Minister was not there. Then the Hon'ble Speaker again went back to the Calling Attention Notice because the Member came right in time.

SRI H. M. CHANNABASAPPA.—I would like to mention that the Motion that was standing in the name of Sri Deve Gowda was under Rule 312.

MADAM SPEAKER.—Exactly.

SRI H. M. CHANNABASAPPA.—It was converted probably on his request or by your goodself into a Calling Attention and the notice came to me only on Saturday Evening at 7 p. m. or 7-30 p m. Yesterday, being Sunday, I could not get in touch with any Officer but any way from morning I called the Officers and collected all the necessary information. I am ready to furnish all details at any time under Rule 312. I had sufficient material for Rule 312. A statement has to be made under Calling Attention, I had to collect information to prepare a statement.

MADAM SPEAKER —There is not much difference between the two.

SRI H. M. CHANNABASAPPA.—There is lot of difference.

MADAM SPEAKER —I have converted like that earlier also.

SRI H. M. CHANNABASAPPA —I have absolutely no objection. I am not questioning the authority. You can convert, shorten and curtail and I am not questioning that. The thing is that it came to me on Saturday evening at about 7-30 p. m.

ಶ್ರೀ ಎಚ್. ಡಿ. ದೇವೇಗೌಡ.—ವಿಪ್ ಅವರು ಸದನದ ಕೆಲಸವನ್ನು ಬಿಟ್ಟು ಬೇರೆ ಕೆಲಸಕ್ಕೆ ಹೋದರೆ ಹೇಗೆ ? ಸದನ ನಡೆಯುವಾಗ ಅವರು ಇಲ್ಲಿರಬೇಕು. ಎರಡು ಜನ ಮಂತ್ರಿಗಳು ಇಲ್ಲದೆ ಸದನದ ಕೆಲಸ ವಿಳಂಬವಾಗುವ ಪರಿಸ್ಥಿತಿ ಬಂತು. ಆದ್ದರಿಂದ ಅವರು ಕರ್ತವ್ಯ ಲೋಪ ಮಾಡಿದ್ದಾರೆ. ಆದ್ದರಿಂದಲೇ ನಾವು ಆಕ್ಷೇಪಣೆ ಮಾಡಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಇದ್ದಾರೆ, ಅವರು ಏನಾದರೂ ಹೇಳುವುದಿದ್ದರೆ ಹೇಳಬಹುದು.

ಶ್ರೀ ಕೆ. ಎಚ್. ರಂಗನಾಥ್.—ವ್ಹಿಪ್ ಈಗ ಬರುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಸಭೆಯ ಕಾರ್ಯಕಲಾಪಗಳು ಸರಿಯಾಗಿಯೇ ನಡೆಯುತ್ತಿವೆ.

SRI K. PURTASWAMY.—Are you suggesting that there is no need to have Government Whip?

SRI K. H RANGANATH.—I never said like that. We never contemplated this contingency.

ತಮಗೆ ಗೊತ್ತಿದೆ, ನಾವು ಹೊಸ ಸಂಪ್ರದಾಯವನ್ನು ಹಾಕುತ್ತಿದ್ದೇವೆ ಮಾನ್ಯ ವಿರೋಧಪಕ್ಷದ ನಾಯಕರನ್ನು ರೆಕಗ್ನೈಸ್ ಮಾಡಬೇಕು ಮತ್ತು ಚೀಫ್ ವ್ಹಿಪ್‌ಗೆ ತಕ್ಕ ಸ್ಥಾನಮಾನ ಕೊಡಬೇಕು ಎಂದು ಒಂದು ಕಾನೂನನ್ನೆ ಮಾಡಿದ್ದೇವೆ. ಆದರೆ ಒಂದೊಂದು ಸಾರಿ ಆವರೂ ಹೊರಗಡೆ ಹೋಗತಕ್ಕ ಪರಿಸ್ಥಿತಿ ಬರಬಹುದು.

ಶ್ರೀ ಎಚ್. ಡಿ. ದೇವೇಗೌಡ,—ಈ ಸದನ ನಡೆಯುಂತಾ ಇರಬೇಕಾದರೆ ಅವರು ಇಲ್ಲಿಯೇ ಇರಬೇಕು.

ಶ್ರೀ ಕೆ. ಎಚ್. ರಂಗನಾಥ್,—ಪ್ರಜಾಪ್ರಭುತ್ವದಲ್ಲಿ ನಾವು ಇದನ್ನೆಲ್ಲಾ ಹೊಸದಾಗಿ ಪ್ರಾರಂಭ ಮಾಡಿರುವಾಗ ಇಂಥ ಪರಿಸ್ಥಿತಿ ಒದಗಿಬರಬಹುದು. ನಮ್ಮಲ್ಲಿ ಇನ್ನೊಬ್ಬರು ಎ ಪ್ ಇದಾ ರೆ. ಅವರೂ ಸಭೆಯ ಕಾರ್ಯಕಲಾಪಗಳನ್ನು ಸರಿಯಾಗಿ ನಡೆಸುವುದಕ್ಕೆ ತೊಂದರೆಯೇನೂ ಆಗಲಾರದು. ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪಮಾಡಿದ್ದನ್ನು ನಾನು ಮನ್ನಣೆ ಮಾಡುತ್ತೇನೆ. ನಾನೂ ಕೂಡ ಇಲ್ಲಿಯೇ ಇರುತ್ತೇನೆ, ಒಂದುವೇಳೆ ಅಂಥ ಪರಿಸ್ಥಿತಿ ಒದಗಿ ಬಂದರೆ, ಸಭೆಯ ಕೆಲಸಗಳನ್ನು ಸರಿಯಾದ ರೀತಿಯಲ್ಲಿ ತೂಗಿಸಿಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡುತ್ತೇವೆ. ಅವರು ಇಲ್ಲಿಯೇ ಇರಲೇಬೇಕು ಎಂದು ಹೇಳಿದರೆ ಅದು ನಮ್ಮ ಮಟ್ಟಿಗೆ ಬಹಳ ಕಷ್ಟವಾಗುತ್ತದೆ ಎಂದೂ ನಾನು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ಅನಿವಾರ್ಯವಾದ ಕಾರಣ ಸಭಾಧ್ಯಕ್ಷರಿಗೆ ತಿಳಿಸಿ ಹೋಗುವುದಾದರೆ ಸರಿ, ಆದರೆ ಬೇರೆ ರಾಜಕಾರಣಕ್ಕೆ ಹೋಗುವುದಾದರೆ ನಮ್ಮ ಉದ್ದೇಶ ಏನು? ಮಂನೆಯು ಕಡೆ ತೊಂದರೆಯಾಯಿತು ಅಂದರೆ ಅವರು ಹೋಗಬಹುದು. ಇವತ್ತು ನಾವು ಅವರನ್ನು ಯಾವ ಉದ್ದೇಶಕ್ಕೋಸ್ಕರ ನೇಮಕ ಮಾಡಿದ್ದೇವೆಯೋ ಅದು ಬಿಟ್ಟು ಅವರು ಬೇರೆ ಕೆಲಸಕ್ಕೆ ಹೋದರೆ the very purpose is going to be defeated. I am sorry for that.

ಶ್ರೀ ಕೆ. ಎಚ್. ರಂಗನಾಥ್.—ಎಲ್ಲರೂ ಒಂದಲ್ಲ ಒಂದು ರೀತಿ ರಾಜಕಾರಣದಲ್ಲಿದ್ದೇವೆ. ತಾನು ಆಗಲೇ ಹೇಳಿದ್ದೇನೆ. ಪ್ರಥಮವಾಗಿ ಇದನ್ನು ನಾವು ಪ್ರಾರಂಭಮಾಡಿದ್ದೇವೆ. ಇಂಥ ಕಂಟೆಂಜನ್ಸಿಬರ ಬಹುದು. ಯಾವ ರೀತಿಯ ಸಂಪ್ರದಾಯ ಹಾಕಿಕೊಳ್ಳಬೇಕೋ ಅದನ್ನು ನಾವು ಹಾಕಿಕೊಳ್ಳ ಬೇಕಾಗುತ್ತದೆ. ಈಗ ಇಂಥ ಪರಿಸ್ಥಿತಿ ಒದಗಿ ಬಂದಿದೆ. ಅವರು ರಾಜಕಾರಣಕ್ಕೆ ಹೋಗಿದ್ದಾರೆ ಎನ್ನುವುದು ಪತ್ರಿಕೆಯಲ್ಲಿ ಬಂದಿರುವುದು ಎಲ್ಲರಿಗೂ ಗೊತ್ತಿದೆ ಇದರಲ್ಲಿ ಯಾವ ಸಂಶಯವೂ ಇಲ್ಲ. ಅವರು ಹೇಗೆ ಹೋಗಿದ್ದಾರೆ ಎನ್ನುವುದನ್ನು ಅವರೆ ಬಂದಮೇಲೆ ಸಭೆಯಲ್ಲಿ ಹೇಳಲಿಕ್ಕೆ ಒಂದು ಅವಕಾಶ ಇದೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸಿಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಮಂಣಿಪಾಲ್ ಕಸ್ತೂರಿಬಾ ಮೆಡಿಕಲ್ ಕಾಲೇಜ್‌ಗೆ ಸರ್ಕಾರ ಈಗ ಸ್ವತಂತ್ರ ವಾದಂಥಾ ಒಂದು ಮಾನ್ಯತೆಯನ್ನು ಕೊಟ್ಟಿದೆ. ಈ ಒಂದು ಮೆಡಿಕಲ್ ಕಾಲೇಜ್ ತನ್ನದೇ ಆದಂಥ ಒಂದು ಸರ್ವ ಸ್ವತಂತ್ರವಾಗಿ ನಡೆದು ಕೊಳ್ಳುವುದಕ್ಕೆ ಸರ್ಕಾರದವರು ಈ ಪೌತ್ತು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಕೇವಲ ಒಂದು ವಾರದ ಹಿಂದೆ ಸರ್ಕಾರ ನಿರ್ಣಯ ಮಾಡಿದೆ. ಇದು ಪತ್ರಿಕೆಯಲ್ಲಿ ಬಂದಮೇಲೆ ನಾನು ಈಪೌತ್ತು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿ ತಮ್ಮ ಅನುಮತಿಯನ್ನು ಕೋರಿದ್ದೇನೆ. ತಾವು ಈಪೌತ್ತು ಇದನ್ನು ಅಜೆಂಡಾದಲ್ಲಿ ಸೇರಿಸಿ ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ.

SRI H. M. CHANNABASAPPA (Minister for Health).—I received a notice from the Office of the Hon'ble Speaker that the notice under Rule 312 has been converted into Call Attention Notice No. 183 and it will be taken up on 27th June, 1977. ಅಧ್ಯಕ್ಷರವರಿಂದ ನನಗೆ ಬಂದಿರತಕ್ಕಂಥಾ ದ್ದನ್ನು ನಾನು ಈಗ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಿಮಂಗೆ ಆಜೆಂಡಾ ಶನಿವಾರ ಸಾಯಂಕಾಲವೇ ಬಂದಿರುತ್ತೆ. ಆದರೆ ಆ ಆಜೆಂಡಾ ತಲುಪುವ ವೇಳೆಗೆ ನೀವು ಬೇರೆ ಕಡೆ ಇದ್ದರೆ ಏನು ಮಾಡುವುದಕ್ಕಾಗುತ್ತದೆ ?

ಅಧ್ಯಕ್ಷರು.—ನಮ್ಮ ಸೆಕ್ರೆಟೇರಿಯೇಟ್‌ನಲ್ಲಿ ಏನಾಗಿದೆ ಅನ್ನುವುದನ್ನು ಹೇಳುತ್ತೇನೆ. ತಾವೇನೋ ೩೦ರ ಕೆಳಗೆ ನೋಟಿಸ್ ಕೊಟ್ಟಿದ್ದೀರಿ ಆದರೆ ಆವೊತ್ತಿನ ದಿವಸ ನೋಟೀಸ್ ಇಲ್ಲದೇನೇ ಈ ಬಗ್ಗೆ ವಿಫುಲವಾಗಿ ಚರ್ಚೆಯೂ ಆಗಿದೆ ಏತಕ್ಕೆಂದರೆ ಮಾನ್ಯ ಮಂತ್ರಿಗಳು ಬೆಳಗಾಂ ಕಾಲೇಜ್ ಬಗ್ಗೆ ಚರ್ಚೆ ನಡೆದಾಗ ಈ ಕಾಲೇಜು ಬಗ್ಗೆ ಎಲ್ಲಾ ವಿವರಗಳನ್ನೂ ಸಹ ಸೋಮವಾರದ ದಿವಸ ಟೇಬಲ್ ಮೇಲೆ ಇಡುತ್ತೇವೆ ಅಂತ ಹೇಳಿದ್ದರು. ಅದಕ್ಕೆ ನಾನು ಇದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿ ಕಳುಹಿಸಿದೆ. ಅವರು ಈ ಬಗ್ಗೆ ಈವೊತ್ತಿನ ದಿವಸ ಸ್ಟೇಟ್‌ಮೆಂಟ್ ಮಾಡುತ್ತಾರೆ. ಮಾನ್ಯ ಸದಸ್ಯರು ಬೇಕಾದ ಪ್ರಶ್ನೆಗಳನ್ನು ಕೇಳಬಹುದು, ಸ್ಪಷ್ಟೀಕರಣ ಬೇಕಾದರೂ ಕೇಳಬಹುದು. ಅದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಪ್ರಶ್ನೆ ಅಲ್ಲ, ನನಗೆ ಬೇಕಾದ್ದು ಈ ಬಗ್ಗೆ ಹೇಳುವುದಕ್ಕೆ ಅವಕಾಶ ಕೊಡಿ. I have given a specific notice to raise this issue under rule 312.

ಅಧ್ಯಕ್ಷರು.—ಇದು ನಮ್ಮ ಸೆಕ್ರೆಟೇರಿಯೇಟ್‌ನಲ್ಲಿ ಆಗಿರತಕ್ಕಂಥಾ ಕನ್‌ಫ್ಯೂಷನ್. ಆದುದರಿಂದ ನೀವು ಈ ಬಗ್ಗೆ ಏಷ್ಟು ಬೇಕಾದರೂ ಪ್ರಶ್ನೆಯನ್ನು ಕೇಳಿ, ನಾನು ಅದಕ್ಕೆ ಅವಕಾಶ ಕೊಡುತ್ತೇನೆ. ಮೊದಲು ಅವರು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ —ಸ್ಟೇಟ್‌ಮೆಂಟ್ ಓದಿದ ಮೇಲೆ ತಾವು ಏನು ಬೇಕಾದರೂ ಪ್ರಶ್ನೆಗಳನ್ನು ಕೇಳಬಹುದು, ಏನಂ ವಿಷಯಗಳನ್ನು ದೇಕಾದರೂ ಕೇಳಬಹುದು.

ಅಧ್ಯಕ್ಷರು.—ಇದು ನಮ್ಮ ಆಫೀಸಿನಲ್ಲಿ ಆಗಿರುವ ಕನ್‌ಫ್ಯೂಷನ್‌ನಿಂದ ಈ ರೀತಿ ಆಗಿದೆ. ತಾವು ಈ ವಿಷಯದಲ್ಲಿ ಏನು ಬೇಕಾದರೂ ಕೇಳಬಹುದು, ಸೃಷ್ಟೀಕರಣ ಬೇಕಾದರೂ ಕೇಳಬಹುದು, ಯಾವ ವಿಷಯಗಳನ್ನಾದರೂ ಕೇಳಬಹುದು, ನಾನು ಅವಕಾಶ ಕೊಡುತ್ತೇನೆ.

SRI H.D. DEVEGOWDA.— The Hon'ble Minister has already agreed that there is a little confusion with regard to this issue. I have no objection to the Hon'ble Minister making a statement now.

MATTER UNDER RULE 312

Re :—Decision of the Government to treat Manipal Medical College on par with the St. John's Medical College.

SRI H.D. DEVEGOWDA (Holenarasipur).—Madam Speaker, I would like to raise a matter regarding the decision of the Government to treat Manipal Medical College on par with the St. John's Medical College under Rule 312.

SRI H. M. CHANNABASAPPA (Minister for Health).—In response to a matter raised under Rule 312 by the Hon'ble Member Sri H. D. Devegowda, I wish to make the following statement.